**<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ</u>**

ಸಿ ಸಿ ನಂ. 424/2022

<u>ಸಾಕ್ಷಿಗೆ ದಿನಾಂಕ 18-01-2024 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 1 P.W.: 1

| | | |
|---|---|---|
| ಹೆಸರು | : | ಯಡ್ರಮ್ಮನಹಳ್ಳಿ ನಾಗಪ್ಪ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ನೆಲ್ಕುದುರೆ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಚಾಸಾ-4 ನನ್ನ ಹೆಂಡತಿಯಾಗಬೇಕು, ಚಾಸಾ-5 ನನಗೆ ಮಾವನಾಗಬೇಕು. 1 ನೇ ಆರೋಪಿ ನನ್ನ ಅಣ್ಣನ ಮಗ, 2 ಮತ್ತು 4 ನೇ ಆರೋಪಿತರು 1 ನೇ ಆರೋಪಿತನ ಮಕ್ಕಳು, 3 ನೇ ಆರೋಪಿ 1 ನೇ ಆರೋಪಿತನ ಹೆಂಡತಿ ಇರುತ್ತಾರೆ.

ಮಾಲವಿ ಗ್ರಾಮದಲ್ಲಿ ಸರ್ವೆ ನಂ. 392 ವಿಸ್ತೀರ್ಣ 5 ಎಕರೆ ನನ್ನ ತಾಯಿಯಾದ ಮುದುಕಮ್ಮರವರ ಹೆಸರಿನಲ್ಲಿರುತ್ತದೆ. ಈಗ್ಗೆ 2 ವರ್ಷದ ಹಿಂದೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ನಾನು ಬಣವಿಗೆ ನೀರನ್ನು ಬಿಟ್ಟು ಕೆಲಸ ಮಾಡುತ್ತಿರುವಾಗ 1, 2 ಮತ್ತು 4 ನೇ ಆರೋಪಿತರು ಏಕಾಏಕಿ ಬಂದು ನಾನು ಬಣವಿಗೆ ನೀರನ್ನು ಬಿಡುತ್ತಿರುವುದನ್ನು ಕಂಡು ಆರೋಪಿತರು ನನಗೆ ನೀರನ್ನು ಬಿಡಬೇಡವೆಂದು ಜಗಳ ತೆಗೆದು ಹೊಡೆಬಡಿ ಮಾಡಿರುತ್ತಾರೆ. 3 ನೇ ಆರೋಪಿಯು ಕಟ್ಟಿಗೆಯಿಂದ ನನ್ನ ಎಡಗೈ ಮುಂಗೈ ಮುರಿಯುವಂತೆ ಹೊಡೆದರು. 1 ನೇ ಆರೋಪಿಯು ಜಗಳ ಬಿಡಿಸಲು ಬಂದು ನನ್ನ ಹೆಂಡತಿಗೆ ಕಾಲಿನಿಂದ ಒದ್ದಿರುತ್ತಾರೆ. 2 ನೇ ಆರೋಪಿತನು ನನ್ನ ಚಪ್ಪೆಗೆ ಹೊಡೆದಿರುತ್ತಾನೆ, ಚಾಸಾ-2, 3 ಮತ್ತು 6 ರವರು ಜಗಳ ಬಿಡಿಸಿದರು ಅವರಿಗೆ ಆರೋಪಿತರು ಹೊಡೆದಿರುತ್ತಾರೆ.

ನಮಗೆ ಪಿತ್ರಾರ್ಜಿತವಾಗಿ ಮೇಲೆ ಹೇಳಿದ ಸರ್ವೆ ನಂಬರ್ ಆಸ್ತಿಯು ಬಂದಿದ್ದು, ನಾವು ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿರುತ್ತೇವೆ. ಆರೋಪಿತರ ತಂದೆಗೆ ಬಂದಂತಹ ಭಾಗವನ್ನು ಮಾರಿಕೊಂಡಿದ್ದು, ಈಗ ಉಳಿದಿರುವ ಆಸ್ತಿಯಲ್ಲಿ ನಾನು 2 ಎಕರೆ ಕೊಡುತ್ತೇನೆಂದು ಹೇಳಿದರೂ ಆರೋಪಿತರು ಹೆಚ್ಚಿಗೆ ಭೂಮಿಯನ್ನು ಕೊಡುವಂತೆ ಜಗಳವನ್ನು ಆಡಿರುತ್ತಾರೆ. ಕಾರಣ ನಾನು ಆರೋಪಿತರ ವಿರುದ್ದ ಇಟಗಿ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ದೂರನ್ನು ದಾಖಲಿಸಿದ ದಿನವೇ ಪೋಲೀಸರು ಬೆಳಿಗ್ಗೆ 9.30 ರ ಸಮಯದಲ್ಲಿ ಘಟನಾ ಸ್ಥಳಕ್ಕೆ ಬಂದಿದ್ದು, ಅಲ್ಲಿ ವಿವರಗಳನ್ನು ಬರೆದುಕೊಂಡಿರುತ್ತಾರೆ.

ಸಾಕ್ಷಿ ದೂರು ಮತ್ತು ಅದರ ಮೇಲಿರುವ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಮತ್ತು ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯಸ್ಥಳ ಪಂಚನಾಮೆ ಮತ್ತು ನಕಾಶೆ ಹಾಗೂ ಅವುಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ2 ಮತ್ತು 3 ಎಂದು ಹಾಗೂ ಸಹಿಗಳನ್ನು ನಿಪಿ-2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಕೃತ್ಯಸ್ಥಳದಲ್ಲಿ ತೆಗೆದ ಪೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಸಮಕ್ಷಮದಲ್ಲಿರುವ ಕಟ್ಟಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಎಂದು ಗುರುತಿಸಲಾಯಿತು.

ಸದರಿ ಘಟನೆಯಲ್ಲಿ ನನ್ನ ಹೆಂಡತಿಯಾದ ಚಾಸಾ-4 ರವರಿಗೂ ಸಹಾ ಹೊಡೆಬಡಿ ಮಾಡಿರುತ್ತಾರೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ದಿಃ 31-03-2022 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ನಾನು ಮತ್ತು ನನ್ನ ಹೆಂಡತಿಯಾದ ಚಾಸಾ-4 ರವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ, 1 ನೇ ಆರೋಪಿಯು ನಮ್ಮ ಜಮೀನಿನಲ್ಲಿಯೇ ಶೆಂಗಾ ಬಣವಿ ಕಡೆಗೆ ಬೋರ್ವೆಲ್ ನೀರನ್ನು

ಬಿಟ್ಟಿದ್ದನ್ನು ನೋಡಿ ನಾನು ಏಕೆ ನೀರು ಬಿಡುತ್ತೀರಿ ಎಂದು ಕೇಳಿದಾಗ 1 ನೇ ಆರೋಪಿಯು ನಮಗೆ ಅವಾಚ್ಯ ಶಬ್ದಗಳಿಂದ ಬೈದು, ನಾನು ನೀರು ಬಿಡುತ್ತೇನೆ, ನಿನ್ನ ಜಮೀನಿನಲ್ಲಿ ನೇಗಿಲು ಹೊಡೆಯುತ್ತೇನೆಂದು ಅವಾಚ್ಯ ಶಬ್ದಗಳಿಂದ ಬೈದಾಡಿ, ಕೈಕಾಲುಗಳಿಂದ ಹೊಡೆಬಡಿ ಮಾಡಿರುತ್ತಾನೆಂದರೆ ಸರಿ. 1 ನೇ ಆರೋಪಿಯ ಮಗನಾದ 2 ನೇ ಆರೋಪಿ ಕಟ್ಟಿಗೆಯಿಂದ ನನ್ನ ಕೈಕಾಲುಗಳಿಗೆ ಹೊಡೆಬಡಿ ಮಾಡಿರುತ್ತಾನೆಂದರೆ ಸರಿ. 3 ನೇ ಆರೋಪಿಯು ನನ್ನ ಗುಪ್ತಾಂಗಕ್ಕೆ ಕೈಹಾಕಿ ಘಾಸಿಗೊಳಿಸಿದ್ದು, ಜಗಳ ಬಿಡಿಸಲು ಬಂದ ನನ್ನ ಹೆಂಡತಿಯಾದ ಚಾಸಾ-4 ರವರಿಗೆ 4 ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಾಡಿ, ಬಲಗಾಲಿನಿಂದ ಚಾಸಾ-1 ರವರ ಸೊಂಟಕ್ಕೆ ಒದ್ದಿರುತ್ತಾರೆಂದರೆ ಸರಿ.

ಜಗಳ ಬಿಡಿಸಿದ ನಂತರ ಆರೋಪಿತರು ಹಿಂದಿರುಗಿ ಹೋಗುವಾಗ ನಿನಗೆ ಜೀವಸಹಿತ ಉಳಿಸುವುದಿಲ್ಲವೆಂದು ಪ್ರಾಣಬೆದರಿಕೆ ಹಾಕಿದರೆಂದರೆ ಸರಿ. ನಾನು ಸದರಿ ಗಾಯಗಳಿಗೆ ಚಿಕಿತ್ಸೆಯನ್ನು ಪಡೆದುಕೊಂಡು ಬಂದು ಹಿರಿಯರಿಗೆ ತಿಳಿಸಿದಾಗ ಅವರು ಪಂಚಾಯ್ತಿ ಮಾಡುವುದಾಗಿ ಆರೋಪಿತರಿಗೆ ಹೇಳಿ ಕಳುಹಿಸಿದ್ದರೂ ಸಹಾ ಆರೋಪಿತರು ಬಂದಿರುವುದಿಲ್ಲ. ಕಾರಣ ನಾನು ದಿಃ 02-04-2022 ರಂದು ತಡವಾಗಿ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆಂದರೆ ಸರಿ. ಅದೇ ದಿನ ಸಂಜೆ 5.15 ರಿಂದ 6.15 ರವರೆಗೆ ನಾನು ತೋರಿಸಿದ ಕೃತ್ಯ ಸ್ಥಳದಲ್ಲಿ ಪೋಲೀಸರು ನಿಪಿ-2 ರಂತೆ ವಿವರವಾದ ಪಂಚನಾಮೆ ಮತ್ತು ನಿಪಿ-3 ರಂತೆ ನಕಾಶೆಯನ್ನು ಹಾಗೂ ನಿಪಿ-4 ರಂತೆ ಪೋಟೋ ತೆಗೆದಿರುತ್ತಾರೆಂದರೆ ಸರಿ.

ಪಾಟೀ ಸವಾಲು. 1 ರಿಂದ 4 ನೇ ಆರೋಪಿತರ ಪರ ಶ್ರೀ ಎನ್ ಜೆ ಬಿ ವಕೀಲರಿಂದಃ-

ಕೃತ್ಯಸ್ಥಳದಿಂದ ಪೊಲೀಸ್ ಠಾಣೆಗೆ 10-15 ನಿಮಿಷದಲ್ಲಿ ಹೋಗಬಹುದು ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ, ಹುಚ್ಚಪ್ಪ ಚಾಸಾ-3 ಮತ್ತು ನನ್ನ ಮಾವ ಚಾಸಾ-7 ದೂರನ್ನು ಕೊಡಲು ಪೊಲೀಸ್ ಠಾಣೆಗೆ ಹೋದೆವು. ನಾನೇ ದೂರು ಬರೆಯಲು ಮಾಹಿತಿ

ಕೊಟ್ಟಿರುತ್ತೇನೆ. ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ಹೇಳಿ ಬರೆಸಿರುತ್ತೇನೆ. ಸದರಿ ದೂರನ್ನು ಚಾಸಾ-7 ರವರು ಬರೆದರು. ನಾನು ಸಹಿ ಮಾಡಿರುತ್ತೇನೆಂದರೆ ಸರಿ.

ಯಾವ ದಿನಾಂಕ ಮತ್ತು ಸಮಯ ಠಾಣೆಗೆ ಹೋಗಿರುತ್ತೇನೆಂದು ಹೇಳಲು ಆಗುವುದಿಲ್ಲ. ನಮಗೂ ಮತ್ತು ಆರೋಪಿತರಿಗೂ ಯಾವುದೇ ವೈಶಮ್ಯ ಇರುವುದಿಲ್ಲ. ನಮಗೂ ಮತ್ತು ಆರೋಪಿತರಿಗೂ ಭೂಮಿಯ ಸಂಬಂಧ ಜಗಳವಾಗುತ್ತಿತ್ತು ಎಂದರೆ ಸರಿ. ನನಗೆ ಆರೋಪಿಯಾದ ಕಿರಣ ಮತ್ತು ಆತನ ತಂದೆ ಬೈದಿರುತ್ತಾರೆ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದರು, ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ